# ಮಕ್ಕಳ 'ಮನೆ ಗ್ರಂಥಾಲಯ' ಮಾದರಿಯಾಗಿವೆ: ನಲಿನ್ ಅತುಲ್

• ಪ್ರಜಾವಾಹಿನಿ–ಕೊಪ್ಪಳ





ಪಾಲಕರ ಸಹಕಾರದೊಂದಿಗೆ ಜಿಲ್ಲೆಯ ಮಕ್ಕಳು ತಮ್ಮ ಮನೆಗಳಲ್ಲಿ ನಿರ್ಮಿಸಿಕೊಂಡಿರುವ ಮಕ್ಕಳ 'ಮನೆ ಗ್ರಂಥಾಲಯ' ಮಾದರಿಯಾಗಿವೆ. ರಾಜ್ಯದಲ್ಲಿ 5 ಸಾವಿರಕ್ಕಿಂತ ಗ್ರಾಮ ಪಂಚಾಯತಿ ಗ್ರಂಥಾಲಯಗಳಿವೆ. ಆದರೆ, ಶಾಲೆಯ ಓರ್ವ ಮಗು ಮನೆಯಲ್ಲಿಯೇ 100 ಪುಸ್ತಕಗಳನ್ನು ಇಟ್ಟುಕೊಂಡು ಗ್ರಂಥಾಲಯ ಮಾಡಿರುವ ಕೆಲಸ ಬಹುಶಃ ಕೊಪ್ಪಳದಲ್ಲಿಯೇ ಮಾತ್ರ. ಇಂತಹ ಕೆಲಸ ಹೆಚ್ಚಾಗಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್‌ನ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ "ಪುಸ್ತಕ ಸಿರಿ ಗೌರವ, ಓದು ಮನೆ ಸಂಭ್ರಮ" ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಹತ್ತು ವರ್ಷದ ಹಿಂದೆ ಶೇ.60ರಷ್ಟು ಇದ್ದ ಗ್ರಂಥಾಲಯಗಳಲ್ಲಿ ಪುಸ್ತಕ ಓದುವವರ ಸಂಖ್ಯೆಯು 2018ರಲ್ಲಿ 30 ರಿಂದ 36ರಷ್ಟು ಇತ್ತು. 2022ಕ್ಕೆ ಶೇ.57 ರಷ್ಟು ಆಗಿ, ಪ್ರಸ್ತುತ ಆ ಸಂಖ್ಯೆ ಮತ್ತೇ ಶೇ.60ಕ್ಕೆ ಬಂದಿದೆ. 2020–21ರಲ್ಲಿ ಕಲ್ಯಾಣ ಕರ್ನಾಟಕ ಭಾಗದಿಂದ ಆರಂಭವಾದ 'ಓದು ಬೆಳಕು' ಕಾರ್ಯಕ್ರಮ ರಾಜ್ಯದ ಎಲ್ಲಾ ಶಾಲೆಗಳ ಮಕ್ಕಳು ಗ್ರಂಥಾಲಯಗಳಲ್ಲಿ ಸುಮಾರು 10 ಲಕ್ಷ ನೋಂದಣಿಯಾಗಿದ್ದಾರೆ. ಇದರಲ್ಲಿ 8 ಲಕ್ಷಕ್ಕೂ ಅಧಿಕ ನೋಂದಣಿ ನಮ್ಮ ಕಲ್ಯಾಣ ಕರ್ನಾಟಕದ ಭಾಗದ ಮಕ್ಕಳಿಂದಾಗಿತ್ತು.

ಕೊಪ್ಪಳ ಜಿಲ್ಲೆಯಿಂದ ಆರಂಭವಾದ 'ಪುಸ್ತಕ ಜೋಳಿಗೆ' ರಾಜ್ಯಕ್ಕೆ ಮಾದರಿಯಾಗಿದೆ. ಈಗ ನಮ್ಮ ಜಿಲ್ಲೆಯ ಸುಮಾರು 300ಕ್ಕೂ ಅಧಿಕ ಮಕ್ಕಳು 100ಕ್ಕಿಂತ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ, ಮನೆಯಲ್ಲಿಯೇ ಗ್ರಂಥಾಲಯ ಮಾಡಿಕೊಂಡಿರುವುದು ಸಂತಸ ತಂದಿದೆ. ಈ ಪ್ರಯತ್ನ ಭವಿಷ್ಯದಲ್ಲಿ ಮಕ್ಕಳಿಗೆ ತುಂಬಾ ಅನುಕೂಲ ಎಂದರು.

ಮಕ್ಕಳು ಶಾಲಾ ಪಠ್ಯ–ಪುಸ್ತಕಗಳ ಜೊತೆಗೆ ರಾಷ್ಟ್ರ, ರಾಜ್ಯಗಳ ಕಲೆ, ಸಾಹಿತ್ಯ, ಸಂಸ್ಕೃತಿ, ಆಚರಣೆ, ಇತಿಹಾಸ ಹಾಗೂ ಇತರೆ ಮಾಹಿತಿ, ಕಥೆಗಳು, ಕಾದಂಬರಿ, ಕಾವ್ಯ ಮತ್ತು ತಮ್ಮ ಜ್ಞಾನವನ್ನು ಹೆಚ್ಚಿಸುವಂತಹ ಒಳ್ಳೆಯ ಪುಸ್ತಕಗಳನ್ನು ಸಂಗ್ರಹಿಸಿ, ಅವುಗಳನ್ನು ಓದುವ ಹವ್ಯಾಸ ರೂಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಮಾತನಾಡಿ, ಜೀವನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ಪರಿಹರಿಸುವಂತಹ ಶಕ್ತಿ ಪುಸ್ತಕಗಳಲ್ಲಿ ಅಡಗಿದೆ. ಪುಸ್ತಕಗಳನ್ನು ಗಣಿತವು ಮೆದುಳಿನ ಸಾಮರ್ಥ್ಯ ಮತ್ತು ಶಕ್ತಿಯನ್ನು ಹೆಚ್ಚಿಸುತ್ತದೆ. ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಓದುವುದರೊಂದಿಗೆ ನಮ್ಮ ಜೀವನದಲ್ಲಿ ಅವರ ಆದರ್ಶಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ವಿಯಾಗುತ್ತೇವೆ ಎಂದರು.

ಸ್ವರಚಿತ ಸಣ್ಣ ಕಥೆಗಳ ಪುಸ್ತಕ ಪ್ರದರ್ಶನ: ಕಾರ್ಯಕ್ರಮದಲ್ಲಿ 'ಮಕ್ಕಳ ಸ್ವರಚಿತ ಸಣ್ಣ ಕಥೆಗಳ ಪುಸ್ತಕಗಳ ಪರಿಚಯ ಮತ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಓದುಮನೆ ಮಕ್ಕಳಿಗೆ 'ಪುಸ್ತಕಸಿರಿ' ಗೌರವ ಅರ್ಪಿಸಲಾಯಿತು.

ಕಾರ್ಯಕ್ರಮದಲ್ಲಿ ಯುನಿಸೆಫ್ ವಿಭಾಗದ ಹರೀಶ್ ಜ್ಯೋಗಿ, ಕಲಿಕಾ ಟಾಟಾ ಟ್ರಸ್ಟ್ ಕಲ್ಯಾಣ ಕರ್ನಾಟಕ ಭಾಗದ ಯೋಜನಾ ನಿರ್ದೇಶಕ ಗಿರೀಶ್, ಕಾರ್ಯಕ್ರಮ ಅಧಿಕಾರಿ ಶಿವಕುಮಾರ ಯಾದವ, ರಾಜ್ಯ ಸಂಪನ್ಮೂಲ ವ್ಯಕ್ತಿ ರಾಜಲಕ್ಷ್ಮೀ, ಸಂಯೋಜಕ ಕಲ್ಲಪ್ಪ ತಳವಾರ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ವ್ಯಕ್ತಿಯ ಬುದ್ಧಿವಂತಿಕೆ ಪ್ರದರ್ಶಿಸುವ 'ಚದುರಂಗದಾಟ'

• ಪ್ರಜಾವಾಹಿನಿ–ಸಿರುಗುಪ್ಪ



ಕಪ್ಪು ಮತ್ತು ಬಿಳಿ ಬಣ್ಣದ ತಲಾ 16 ಕಾಯಿಗಳ ನಡುವೆ 64 ಚೌಕಾಕಾರದ ಕೋಣೆಗಳಲ್ಲಿ ನಡೆಯುವ ಯುದ್ಧದ ಆಟವೇ ಚದುರಂಗದಾಟ. ವ್ಯಕ್ತಿಯ ಬುದ್ಧಿವಂತಿಕೆಯನ್ನು ಪ್ರದರ್ಶಿಸುವ ಚದುರಂಗ ಆಟ ಇದಾಗಿದೆ ಎಂದು ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಟಿ.ಹುಚ್ಚಿರಪ್ಪ ಹೇಳಿದರು. ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಪ್ರಜ್ಞಾನಂದ ಚೆಸ್ ಶಾಲೆ, ಕರ್ನಾಟಕ ಸರಕಾರಿ ನೌಕರರ ಸಂಘದ ಸಯೋಗದಲ್ಲಿ ಆಯೋಜಿಸಲಾಗಿದ್ದ ಪಂದ್ಯಾವಳಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಾಧನ ಕೋಚಿಂಗ್ ಸೆಂಟರ್ ವ್ಯವಸ್ಥಾಪಕ ಲಿಂಗನಗೌಡ ಅವರು, ಈ ಪಂದ್ಯವಳಿ ಭಾರತದಲ್ಲಿ ಉದಯವಾಗಿ ಇಡೀ ಪ್ರಪಂಚದಲ್ಲಿ ಪಸರಿಸಿದೆ, ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ತನ್ನ 18ನೇ ವಯಸ್ಸಿಗೆ 18ನೇ ಯುವ ಚೆಸ್ ಚಾಂಪಿಯನ್ ಆಗಿದ್ದಾರೆ. ಕೋನೇರೂ ಹಂಪಿ ವಿಶ್ವ ಚೆಸ್ ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆಗಿದ್ದು ನಮ್ಮೆಲ್ಲರ ಹೆಮ್ಮೆಯ ಸಂಗಾತಿಯಾಗಿದೆ ಎಂದರು.

ರಾಷ್ಟ್ರೀಯ ಹಿರಿಯ ಚೆಸ್ ತೀರ್ಪುಗಾರ ಹಾಗೂ ಮುಖ್ಯ ಸಂಘಟಕಾರ ಜಗದೀಶ ಕೋರಿ ಸೇರಿದಂತೆ ಕಲುಬುರಗಿ, ಸಿಂಧನೂರು, ಕಂಪ್ಲಿ, ಬಳ್ಳಾರಿ, ರಾಯಚೂರು, ನೇರೆಯ ಸೀಮಾಂಧ್ರ ಪ್ರದೇಶದ ಆಧೋನಿ ಮತ್ತು ಗುಂಟಕಲ್ ಪ್ರದೇಶದಿಂದ ಒಟ್ಟು 283 ಮಕ್ಕಳು ಭಾಗವಹಿಸಿದ್ದರು.

ಬಳ್ಳಾರಿಯ ಭೂಗಲ್ ವೇದಾಂತ ರೆಡ್ಡಿ ಪ್ರಥಮ, ಭಾನುಪ್ರಸಾದ್ ಯಾದವ್ ದ್ವಿತೀಯ ಸ್ಥಾನ, ಗುರು ಬಾಂದ್ರ ತೃತೀಯ ಸ್ಥಾನದಲ್ಲಿ ವಿಜೇತರಾಗಿದ್ದಾರೆ, ಇವರಿಗೆ ನಗದು ಮತ್ತು ಚಾಂಪಿಯನ್ ಟ್ರೋಫಿ ಹಾಗೂ ಪ್ರಮಾಣ ಪತ್ರ, ಪದಕವನ್ನು ವಿತರಿಸಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಕೆ.ಎಂ. ಚಂದ್ರಕಾಂತ, ಅಂತರಾಷ್ಟ್ರೀಯ ಚೆಸ್ ತೀರ್ಪುಗಾರರಾದ ಪ್ರಮೋದ್ ರಾಜ್ಯೋರೆ, ರಾಷ್ಟ್ರೀಯ ಹಿರಿಯ ಚೆಸ್ ತೀರ್ಪುಗಾರ ಬಿ.ಪ್ರಕಾಶ, ವಕೀಲ ದೊಡ್ಡನಗೌಡ, ರೈಸ್ ಮಿಲ್ ಮಾಲೀಕರಾದ ಚಂದ್ರಶೇಖರ, ಬೇವಿನಹಾಳ್ ಮಂಜುನಾಥ ಶೆಟ್ಟಿ, ಶಾಂತಿನಿಕೇತನ ಶಾಲೆಯ ಮುಖ್ಯಗುರು ಧರ್ಮಣ್ಣ ಇದ್ದರು.

# ಅಧ್ಯಾತ್ಮದ ಜೊತೆಗೆ ಶಿಕ್ಷಣಕ್ಕೆ ಒತ್ತು ನೀಡಿ

• ಪ್ರಜಾವಾಹಿನಿ–ಹೊಸಪೇಟೆ





ತಾಲೂಕಿನ ಕಮಲಾಪುರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಬಳಿ ಇರುವ ಗಾಳಿ ದುರ್ಗಮ್ಮ ದೇವಸ್ಥಾನದ ಕಳಶ ಸ್ಥಾಪನೆ ಸಡಗರ ಸಂಭ್ರಮದಿಂದ ನಡೆಯಿತು. ಬೆಳಗ್ಗೆ 6ಕ್ಕೆ ತುಂಗಭದ್ರ ನದಿಗೆ ಗಂಗಾಪೂಜೆ ಸಲ್ಲಿಸಿದ ಹತ್ತಾರು ಹೆಣ್ಣು ಮಕ್ಕಳು ಕಳಶ ಹೊತ್ತು ಮಂಗಳವಾದ್ಯದ ಜೊತೆಗೆ, ಜಯಘೋಷಗಳೊಂದಿಗೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಬಂದು ದೇವಿಗೆ ಪೂಜೆ ಸಲ್ಲಿಸಿ, ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಗೋಪುರ ಕಳಶ ಪ್ರತಿಷ್ಠಾಪನಾ ಕಾರ್ಯ ಜರುಗಿತು.

ಈ ಕುರಿತು ಪ್ರಜಾವಾಹಿನಿ ಸುದ್ದಿಗಾರರೊಂದಿಗೆ ಮಾತನಾಡಿದ ಪುರಸಭೆ ಉಪಾಧ್ಯಕ್ಷ ಹೆಚ್. ಗೋಪಾಲಕೃಷ್ಣ ಭೂಮಿಯ ಮೇಲೆ ನಡೆಯುವ ಎಲ್ಲಾ ಕಾರ್ಯಗಳು ಭಗವಂತನ ಇಚ್ಛೆಯಂತೆ ನಡೆಯುತ್ತವೆ. ಮನುಷ್ಯನಿಗೆ ಹೊಂದಾಣಿಕೆ ಮತ್ತು ತಾಳ್ಮೆ ಬಹಳ ಮುಖ್ಯ. ಹಾಗಾಗಿ ನಾವೆಲ್ಲರೂ ಭಾತೃತ್ವದಿಂದ ಬದುಕಬೇಕು ಎಂದು ಮಾತನಾಡಿದರು.

ಈ ಹಿಂದೆ ನಮ್ಮ ಪೂರ್ವಜರು ಪ್ರತಿವರ್ಷ ದಸರಾ ಹಬ್ಬದ ಒಂಬತ್ತನೇ ದಿನ ದೇವರ ಬಣ್ಣಿ ದಿನದಂದು ಕೆಂಚಮ್ಮ ಮತ್ತು ಗಾಳೆಮ್ಮನ ಪಲ್ಲಕ್ಕಿಯನ್ನು ಈ ಜಾಗದಲ್ಲಿ ಕೂರಿಸಿ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ. ಅಂದಿನ ಯಜಮಾನರು ಈ ಜಾಗವನ್ನು ಉಳಿಸಿದ್ದಕ್ಕಾಗಿ ಇಂದು ಸಮಾಜದ ಯಜಮಾನರ ನೇತೃತ್ವದಲ್ಲಿ ಎಲ್ಲರ ಸಹಕಾರದೊಂದಿಗೆ ದೇವಸ್ಥಾನ ಮತ್ತು ಎರಡು ವಾಣಿಜ್ಯ ಮಳಿಗೆಗಳು ಹಾಗೂ ರೆಸ್ಟೋರೆಂಟ್ ಕಟ್ಟಲು ಸಾಧ್ಯವಾಯಿತು. ಯುವಕರು ಅಧ್ಯಾತ್ಮದ ಜೊತೆಗೆ ಐಎಎಸ್, ಐಪಿಎಸ್ ನಂತಹ ಉನ್ನತ ಶಿಕ್ಷಣಕ್ಕೆ ಒತ್ತು ನೀಡಬೇಕು. ವಿದ್ಯಾರ್ಥಿಗಳು ಸರಿಯಾದ ಮಾರ್ಗದಲ್ಲಿ ನಡೆದರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮಾಜಿ ಪಟ್ಟಣ ಪಂಚಾಯಿತಿ ಸದಸ್ಯ ಎನ್.ಶಿವರಾಮ ಮಾತನಾಡಿ, ನಗರದ ಯುವಕರು ಮತ್ತು ಹಿರಿಯರು ಹಾಗೂ ಮಹಿಳೆಯರ ಸಹಕಾರದಿಂದ ವಾಣಿಜ್ಯ ಮಳಿಗೆಗಳನ್ನು ಕಟ್ಟಿದ್ದೇವೆ. ಇದರಿಂದ ಸಮಾಜಕ್ಕೆ ಆರ್ಥಿಕ ಸಂಪನ್ಮೂಲ ಒದಗಿ ಬರುತ್ತದೆ ಮತ್ತು ಸಮುದಾಯದ ಅಭಿವೃದ್ಧಿ ಆಗುತ್ತದೆ. ಮುಂದಿನ ದಿನಮಾನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ ಇನ್ನು ಹೆಚ್ಚಿನ ಕಾರ್ಯಗಳನ್ನು ಮಾಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಮಲ್ಲೇಶಪ್ಪ ದೊಡ್ಮನೆ, ಮಧುಗುಣಿಕೆ ವೆಂಕಟೇಶ್, ಆರ್.ಶೇಖರ್, ಹೆಚ್.ಹನುಮಂತಪ್ಪ, ಮಲ್ಲೇಶಪ್ಪ, ರೈತ ಮುಖಂಡ ಹುಲುಗಪ್ಪ, ಮಾಜಿ ಉಪಾಧ್ಯಕ್ಷ ತಿಪ್ಪೇಸ್ವಾಮಿ, ಜೆಡಿಎಸ್ ವೆಂಕಟೇಶ್, ಪೂಜಾರಿ ಸುಂಕಪ್ಪ, ಕಾಡಪ್ಪ, ಹೋಟೆಲ್ ಬಸಮ್ಮ, ಹನುಮವ್ವ, ನೀಲವ್ವ, ದುರ್ಗಮ್ಮ, ತಿಪ್ಪಕ್ಕ, ದೇವೇಂದ್ರ ಸೇರಿದಂತೆ ಇತರರು ಇದ್ದರು.

# ಕೆಲಸ ಮಾಡಿ, ಇಲ್ಲ ಜಾಗ ಖಾಲಿ ಮಾಡಿ

• ಪ್ರಜಾವಾಹಿನಿ–ಕೂಡ್ಲಿಗಿ





ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಮಸ್ಯೆಗಳ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಕ್ಷೇತ್ರದ ಶಾಸಕ ಡಾ.ಶ್ರೀನಿವಾಸ್ ಎನ್.ಟಿ.ರವರು ಖುದ್ದು ಬೇಟಿಕೊಟ್ಟು ಪರಿಸ್ಥಿತಿ ಪರಿಶೀಲಿಸಿ, ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿದರು.

ಚಿಕಿತ್ಸೆ ಬಯಸಿ ಆಸ್ಪತ್ರೆಗೆ ಬರುವ ಬಡರೋಗಿಗಳು ಪ್ರಾಣಿಗಳಲ್ಲ. ಅವರೂ ನಮ್ಮಂತೆಯೇ ಮನುಷ್ಯರು. ನಿಮ್ಮ ಮನೆಯವರು ಅಥವಾ ಸಂಬಂಧಿಕರು ಚಿಕಿತ್ಸೆಗೆ ಬಂದರೆ ಇದೇ ರೀತಿ ನಿರ್ಲಕ್ಷ್ಯ ತೋರುತ್ತೀರಾ? ಮಾನವೀಯತೆಯಿಂದ, ಪ್ರಾಮಾಣಿಕವಾಗಿ ಸಮಯಕ್ಕೆ ಸರಿಯಾಗಿ ಬಂದು ಕೆಲಸ ಮಾಡಿ, ಇಲ್ಲ ಜಾಗ ಖಾಲಿ ಮಾಡಿ ಎಂದು ತಾಲೂಕು ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗಳಿಗೆ ಶಾಸಕರು ತೀವ್ರ ತರಾಟೆಗೆ ತೆಗೆದುಕೊಂಡರು.

ಸರ್ಕಾರ ರೋಗಿಗಳ ಆರೈಕೆಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತದೆ. ಅಧಿಕಾರಿಗಳು ಮತ್ತು ವೈದ್ಯಕೀಯ ಸಿಬ್ಬಂದಿಗಳು ಮೊಬೈಲ್, ಸಾಮಾಜಿಕ ಜಾಲಾತಾಣಗಳೆಂದು ಗಮನಹರಿಸದೆ, ರೋಗಿಗಳ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಅಲ್ಲದೆ, ವೈದ್ಯಕೀಯ ಸಿಬ್ಬಂದಿಗಳ ಕಾರ್ಯವೈಖರಿ ಬಗ್ಗೆ ಪ್ರಶ್ನಿಸಿ, ಆಸ್ಪತ್ರೆ ಸ್ವಚ್ಛತೆ, ಮೂಲಭೂತ ಸೌಕರ್ಯದ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಗುಡುಗಿದರು.

ಸಿಬ್ಬಂದಿಗಳಿಗೆ ಯಾರಿಂದಾದರೂ ತೊಂದರೆಯಾದರೆ ನನ್ನ ಗಮನಕ್ಕೆ ತನ್ನಿ ಅದನ್ನು ನಾನು ಸರಿಪಡಿಸುತ್ತೇನೆ. ಸಿಬ್ಬಂದಿಗಳ ಕೊರತೆ, ಆಸ್ಪತ್ರೆಯಲ್ಲಿ ವೈದ್ಯಕೀಯ ಸೌಲಭ್ಯಗಳು ಮತ್ತು ಔಷಧಿ ಮಾತ್ರೆಗಳು ಕೊರತೆ ಇಲ್ಲದಂತೆ ನೋಡಿಕೊಳ್ಳಬೇಕು. ರೋಗಿಗಳಿಗೆ ಗುಣಮಟ್ಟದ ಆಹಾರವನ್ನು ಮೆನು ಪ್ರಕಾರವೇ ನೀಡಬೇಕು. ಇಲ್ಲಿಗೆ ಹೆಚ್ಚಾಗಿ ಬಡವರು ಬರುತ್ತಾರೆ. ಅವರಿಗೆ ಉತ್ತಮ ಸೇವೆ ನೀಡುವುದು ವೈದ್ಯರ ಜವಾಬ್ದಾರಿ ಆಗಬೇಕು ಎಂದು ಶಾಸಕ ಡಾ.ಶ್ರೀನಿವಾಸ್ ಖಡಕ್ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು, ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶರಣರ ತತ್ವಾದರ್ಶಗಳಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ

• ಪ್ರಜಾವಾಹಿನಿ–ಬೆಳಗಾವಿ



ಉತ್ತಮ ಸಮಾಜ ನಿರ್ಮಾಣಕ್ಕೆ ಶರಣರ ಆದರ್ಶಗಳು ಅಗತ್ಯವಾಗಿವೆ. ಇಂದಿನ ಯುವಜನತೆ ಶರಣರ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಮಹಾನಗರ ಪಾಲಿಕೆ ಉಪ ಆಯುಕ್ತ ಉದಯಕುಮಾರ ತಳವಾರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಂಯುಕ್ತ ಆಶ್ರಯದಲ್ಲಿ ನಗರದ ಕುಮಾರ ಗಂಧರ್ವ ಕಲಾ ರಂಗಮಂದಿರದಲ್ಲಿ ಕಾಯಕ ಶರಣರಾದ ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಸಮಗಾರ ಹರಳಯ್ಯ ಹಾಗೂ ಉರಿ ಲಿಂಗಪೆದ್ದಿಯವರುಗಳ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಾರ್ಶನಿಕರು, ಶರಣರು ಮತ್ತು ಸಂತರ ಜಯಂತಿಗಳನ್ನು ಆಚರಿಸುವುದರ ಮೂಲಕ ಅವರುಗಳ ತತ್ವಾದರ್ಶಗಳನ್ನು ಸಮಾಜಕ್ಕೆ ತಿಳಿಸುವ ಕಾರ್ಯ ಮಾಡಲಾಗುತ್ತಿದೆ. ತಳ ಸಮುದಾಯದ ಅಭ್ಯುದ್ಯೇಯಕ್ಕಾಗಿ ಸರಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿವೆ. ಈ ಯೋಜನೆಗಳ ಸದುಪಯೋಗ ಪಡೆದುಕೊಂಡು ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಸಧೃಡರಾಗಲು ಉದಯಕುಮಾರ ತಳವಾರ ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮ.ನಾ.ರಾ.ಸಂಘದ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ನಿರ್ಮಲಾ ಬಟ್ಟಲ ಅವರು, 12ನೇ ಶತಮಾನದಲ್ಲಿ ಚಾತುರ್ವರ್ಣ ವ್ಯವಸ್ಥೆ ಇತ್ತು. ಅಂತಹ ವ್ಯವಸ್ಥೆಯನ್ನು ಹೋಗಲಾಡಿಸಿ, ಎಲ್ಲರೂ ಸಮಾನರು ಎಂದ ಬಸವಣ್ಣ ಕ್ರಾಂತಿಯನ್ನೇ ಪ್ರಾರಂಭಿಸಿದ್ದರು. ಅಂತಹ ಸಂದರ್ಭದಲ್ಲಿ ಕಾಯಕ ಶರಣರು ಕ್ರಾಂತಿಯಲ್ಲಿ ಗುರುತಿಸಿಕೊಂಡಿದ್ದರು ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಮಹಾನಗರ ಪಾಲಿಕೆಯ ಉಪ ಆಯುಕ್ತ ಉದಯಕುಮಾರ ತಳವಾರ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಮಲ್ಲೇಶ ಚೌಗಲೆ, ಭೀಮರಾವ ಪವಾರ, ವಿವೇಕ ಶೇರಖಾನೆ, ಯೋಗೇಶ ಮಾವರಕರ, ಹಾಗೂ ಸಮಾಜದ ಗಣ್ಯರು ಉಪಸ್ಥಿತರಿದ್ದರು.

ICICI Home Finance | ಕಾರ್ಪೋರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ – ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ – 400059, ಭಾರತ

ಶಾಖಾ ಕಛೇರಿ: ನೆಲಮಹಡಿ, ಶ್ರೀ ರಾಘವೇಂದ್ರ ಮ್ಯಾನ್‌ಷನ್, ನಂ. 2767/ಬಿ, ಹೊಸ ನಂ. 83/ಬಿ, ಕಾಂತರಾಜ್ ಅರಸ್ ರಸ್ತೆ, 1ನೇ ಮುಖ್ಯ, ಸರಸ್ವತಿಪುರಂ, ಮೈಸೂರು–570009

ಖಾಸಗಿ ಒಪ್ಪಂದದ ಮೂಲಕ ಸ್ಥಿರ ಆಸ್ತಿಗಳ ಮಾರಾಟಕ್ಕೆ ಸೂಚನೆ

ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2022ರ ನಿಯಮ 8(8)r/w ನಿಯಮ 9 (1)ರೊಂದಿಗೆ ಓದಿದಂತೆ, ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯಿದೆ, 2002ರ ಜಾರಿ ಅಡಿಯಲ್ಲಿ ಖಾಸಗಿ ಒಪ್ಪಂದದ ಮೂಲಕ ಸ್ಥಿರ ಆಸ್ತಿಗಳ ಮಾರಾಟದ ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಖಾತರಿದಾರರಿಗೆ ಸೂಚನೆಯನ್ನು ನೀಡಲಾಗಿದ್ದು, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಐಸಿಐಸಿಐ ಹೆಚ್‌ಎಫ್‌ಸಿ) ಕೆಳಗೆ ನಮೂದಿಸಲಾದ ಅಡಮಾನದ ಆಸ್ತಿಯ ಮಾರಾಟಕ್ಕಾಗಿ ಹಲವಾರು–ಹರಾಜುಗಳನ್ನು ನಡೆಸಿತು. ಆದಾಗ್ಯೂ, ಅಂತಹ ಎಲ್ಲಾ ಇ–ಹರಾಜುಗಳು ವಿಫಲವಾಗಿವೆ. ಈಗ, ಆಸಕ್ತ ಖರೀದಿದಾರರು ಐಸಿಐಸಿಐ ಹೆಚ್‌ಎಫ್‌ಸಿ ಅನ್ನು ಮೀಸಲು ಬೆಲೆಯಲ್ಲಿ ಖರೀದಿಸುವ ಪ್ರಸ್ತಾಪದೊಂದಿಗೆ ಸಂಪರ್ಕಿಸಿದ್ದಾರೆ (ದಯವಿಟ್ಟು ಕೆಳಗಿನ ಕೋಷ್ಟಕವನ್ನು ನೋಡಿ) ಸ್ಥಿರ ಆಸ್ತಿಯನ್ನು ಅಡಮಾನಗೊಳಿಸಿದ / ಸುರಕ್ಷಿತ ಸಾಲಗಾರನಿಗೆ ವಿಧಿಸಲಾಗಿದ್ದು, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ ಹಾಗೂ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾದ ಆಸ್ತಿಯನ್ನು ಖಾಸಗಿ ಒಪ್ಪಂದದ ಮೂಲಕ 'ಎಲ್ಲಿದೆಯೋ', 'ಏನಿದೆಯೋ' ಮತ್ತು 'ಹೇಗಿದೆಯೋ' ಆದರ ಆಧಾರದ ಮೇಲೆ ಮಾರಾಟ ಮಾಡಲಿದ್ದಾರೆ.

| ಕ್ರ. ಸಂ. | ಸಾಲಗಾರರು/ಸಹ ಸಾಲಗಾರರು/ ಜಾಮೀನುದಾರರು/ ಕಾನೂನು ಉತ್ತರಾಧಿಕಾರಿಗಳ ಹೆಸರು/ಸಾಲದ ಖಾತೆ ಸಂಖ್ಯೆ | ಗಮನಕ್ಕೆ ಬಂದ ಯಾವುದೇ ಹೊರೆಗಳೊಂದಿಗೆ ಭದ್ರತಾ ಆಸ್ತಿಯ(ಗಳ) ವಿವರ | ಬಾಕಿ ಮೊತ್ತ | ಮೀಸಲು ಬೆಲೆ ಮುಂಗಡ ಠೇವಣಿ ಹಣ | ಆಸ್ತಿ ಪರಿವೀಕ್ಷಣೆಯ ದಿನಾಂಕ & ಸಮಯ | ಹರಾಜಿನ ದಿನಾಂಕ & ಸಮಯ | ಒಂದು ದಿನ ಮುಂಚಿನ ಹರಾಜಿನ ದಿನಾಂಕ & ಸಮಯ | ಸ್ವಾಧೀನ ಹಂತ |
|---|---|---|---|---|---|---|---|---|
| (ಎ) | (ಬಿ) | (ಸಿ) | (ಡಿ) | (ಇ) | (ಎಫ್) | (ಜಿ) | (ಹೆಚ್) | (ಐ) |
| 1. | ಎಂ ಎಸ್ ಭಗತ್ (ಸಾಲಗಾರ) ಪ್ರಿಯಾಂಕ ಬಿ ಎಂ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ LHMYS00001327207 | ನಿವೇಶನ ಸಂಖ್ಯೆ 44, ಆಸ್ತಿ ಸಂಖ್ಯೆ 305/44, ಪಿಐಡಿ ಸಂಖ್ಯೆ 15220040416102100 6, ಮತ್ತು ನಿವೇಶನ ಸಂಖ್ಯೆ 45, ಆಸ್ತಿ ಸಂಖ್ಯೆ 305/45, ಪಿಐಡಿ ಸಂಖ್ಯೆ 152200404 161021009 ಸರ್ವೆ ಸಂಖ್ಯೆ 12/1, ಮೇಗಳಾಪುರ ಗ್ರಾಮ, ಕೂರ್ಗಳ್ಳಿ ಗ್ರಾಮ ಪಂಚಾಯತ್, ಯಲವಾಲ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ | ರೂ. 39.44, 653/– ಜನವರಿ 06, 2025 | ರೂ. 17,00,000/– ರೂ. 1,70,000/– | ಫೆಬ್ರವರಿ 20, 2025 ಬೆಳಗ್ಗೆ 11:00 ಸಂಜೆ 3:00 | ಫೆಬ್ರವರಿ 27, 2025 ಮಧ್ಯಾಹ್ನ 02:00 ಸಂಜೆ 3:00 | ಫೆಬ್ರವರಿ 25, 2025 ಸಂಜೆ 4:00 ಕ್ಕಿಂತ ಮುಂಚೆ | ಭೌತಿಕ ಸ್ವಾಧೀನತೆ |
| 1. | ಮಂಜುಳ ಕೆ (ಸಾಲಗಾರ) ಸಂಜಯ್ ಕುಮಾರ್ ಎನ್ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ LHMYS00001321490 | ನಿವೇಶಣ ಸಂಖ್ಯೆ 46, ಆಸ್ತಿ ಸಂಖ್ಯೆ 305/46, ನಿವೇಶನ ಸಂಖ್ಯೆ 47, ಆಸ್ತಿ ಸಂಖ್ಯೆ 305/47, ವಿಶಿಷ್ಟ ಸಂಖ್ಯೆ 15220040416102101 2 ಮತ್ತು ವಿಶಿಷ್ಟ ಸಂಖ್ಯೆ 152200404161021014, ಸರ್ವೆ ಸಂಖ್ಯೆ 12/1, ಮೇಗಳಾಪುರ ಗ್ರಾಮ, ಕೂರ್ಗಳ್ಳಿ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ | ರೂ. 33.39, 392/– ಜನವರಿ 06, 2025 | ರೂ. 13,00,000/– ರೂ. 1,30,000/– | ಫೆಬ್ರವರಿ 20, 2025 ಬೆಳಗ್ಗೆ 11:00 ಸಂಜೆ 3:00 | ಫೆಬ್ರವರಿ 27, 2025 ಮಧ್ಯಾಹ್ನ 02:00 ಸಂಜೆ 3:00 | ಫೆಬ್ರವರಿ 25, 2025 ಸಂಜೆ 4:00 ಕ್ಕಿಂತ ಮುಂಚೆ | ಭೌತಿಕ ಸ್ವಾಧೀನತೆ |

ಆನ್‌ಲೈನ್ ಹರಾಜನ್ನು ನಮ್ಮ ಹರಾಜು ಏಜೆನ್ಸಿ ಮಾಟೆಕ್ಸ್ ನೆಟ್ ಪ್ರೈ. ಲಿ.ನ ವೆಬ್‌ಸೈಟ್ (URL Link-https://assets.matexauctions.com)ನಲ್ಲಿ ನಡೆಸಲಾಗುವುದು. ನಿರೀಕ್ಷಿತ ಬಿಡ್ದಾರರು ಮುಂಗಡ ಠೇವಣಿ ಹಣವನ್ನು (ಇಎಂಡಿ) ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಮೂಲಕ (ಕಾಲಂ ಇ ನೋಡಿ) ಐಸಿಐಸಿಐ ಹೋಂ ಫೈನಾನ್ಸ್ ಲಿಮಿಟೆಡ್, ಮೇಲೆ ತಿಳಿಸಲಾದ ಶಾಖಾ ಕಛೇರಿ ವಿಳಾಸಕ್ಕೆ ಫೆಬ್ರವರಿ 25, 2025ರ ಸಂಜೆ 04.00 ಗಂಟೆಗೆ ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು. ನಿರೀಕ್ಷಿತ ಬಿಡ್ದಾರರು (ಗಳು) ಸಹಿ ಮಾಡಿದ ನೋಂದಣಿ ಫಾರ್ಮ್ ಮತ್ತು ಬಿಡ್ ನಿಯಮಗಳು ಮತ್ತು ಷರತ್ತುಗಳ ನಮೂನೆಯನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಬ್ರಾಂಚ್ ಆಫೀಸ್ ವಿಳಾಸದಲ್ಲಿ ಫೆಬ್ರವರಿ 25, 2025 ರಂದು ಅಥವಾ ಅದಕ್ಕೂ ಮೊದಲು ಸಂಜೆ 05:00 ಗಂಟೆಗೆ ಮೊದಲು ಸಲ್ಲಿಸಬೇಕು. ಮುಂಗಡ ಠೇವಣಿ ಹಣಕ್ಕೆ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಪಡೆದ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಅನ್ನು "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಪರವಾಗಿರಬೇಕು. – ಹರಾಜು" ಲೇಖನದ ಮೇಲೆ ಉಲ್ಲೇಖಿಸಲಾದ ಶಾಖೆಯ ಕಚೇರಿ ವಿಳಾಸದಲ್ಲಿ ಪಾವತಿಸಬೇಕು.

ಮೇಲೆ ತಿಳಿಸಿದ ಆಸಕ್ತ ಖರೀದಿದಾರರು ನೀಡುವ ಮೊತ್ತಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಸಾರ್ವಜನಿಕರನ್ನು ವಿನಂತಿಸಲಾಗಿದೆ. ಮೇಲೆ ತಿಳಿಸಲಾದ ಆಸಕ್ತ ಖರೀದಿದಾರರು ನೀಡುವ ಮೊತ್ತಕ್ಕಿಂತ ಹೆಚ್ಚಿನ ಯಾವುದೇ ಬಿಡ್‌ಗಳನ್ನು ಐಸಿಐಸಿಐ ಹೆಚ್‌ಎಫ್‌ಸಿ ಸ್ವೀಕರಿಸದಿದ್ದಲ್ಲಿ, ಅಡಮಾನಗೊಳಿಸಿದ ಆಸ್ತಿಯನ್ನು ಭದ್ರತಾ ಆಸಕ್ತಿ (ಜಾರಿ) ನಿಯಮ 2002ರ ನಿಯಮ 8(8) r/w ನಿಯಮ 9 (1) ರ ಪ್ರಕಾರ ಆಸಕ್ತ ಖರೀದಿದಾರರಿಗೆ ಮಾರಾಟ ಮಾಡಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಪರಿಶೀಲನೆ, ಹರಾಜು ಅಥವಾ ಟೆಂಡರ್‌ಗಳ ಸಲ್ಲಿಕೆಯ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ 9920807300ಕ್ಕೆ ಸಂಪರ್ಕಿಸಿ.

ಯಾವುದೇ ಹೆಚ್ಚುವರಿ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿರುತ್ತಾರೆ. ಮಾರಾಟದ ವಿಸ್ತೃತ ನಿಯಮಗಳು ಮತ್ತು ಷರತ್ತುಗಳಿಗಾಗಿ https://www.icicihfc.com ಗೆ ಭೇಟಿ ನೀಡಿ.

ದಿನಾಂಕ: ಫೆಬ್ರವರಿ 12, 2025
ಸ್ಥಳ: ಮೈಸೂರು

ಅಧಿಕೃತ ಅಧಿಕಾರಿ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್
ಸಿಐಎನ್ ನಂಬರ್: U65922MH1999PLC120106

# ವಿದ್ಯಾಭ್ಯಾಸದಲ್ಲಿ ಅಂಗವಿಕಲರಿಗೆ ಶೇ.5ರಷ್ಟು ಸ್ಥಾನಗಳ ಮೀಸಲು

• ಪ್ರಜಾವಾಹಿನಿ–ಕೊಪ್ಪಳ



ಎಲ್.ಕೆ.ಜಿ.ಯಿಂದ ಪಿ.ಜಿ.ವರೆಗಿನ ವಿದ್ಯಾಭ್ಯಾಸದಲ್ಲಿ ಅಂಗವಿಕಲರಿಗೆ ಶೇ.5ರಷ್ಟು ಸ್ಥಾನಗಳು ಮೀಸಲಿರಿಸಲಾಗಿದೆ ಎಂದು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತರಾದ ದಾಸ್ ಸೂರ್ಯವಂಶಿ ಹೇಳಿದರು. ಮಂಗಳವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಅನುಷ್ಠಾನಗೊಳಿಸುವ ಕುರಿತು ಕರೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ರಾಷ್ಟ್ರದಲ್ಲಿನ ವಿಕಲಚೇತನ ವ್ಯಕ್ತಿಗಳಿಗೆ ಅಗತ್ಯವಿರುವ ಆರೋಗ್ಯ, ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ ಹಾಗೂ ಸಾಮಾಜಿಕ ಭದ್ರತೆಗಳಂತಹ ಪುನರ್ವಸತಿ ಸೇವೆಗಳನ್ನು ಕಲ್ಪಿಸುವುದರ ಮೂಲಕ ಸಮಾನ ಅವಕಾಶ ಕಲ್ಪಿಸಿ ಅವರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–2016ನ್ನು ಜಾರಿಗೆ ತಂದಿದೆ. ಅಧಿನಿಯಮವನ್ನು ಕರ್ನಾಟಕ ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸರ್ಕಾರವು 'ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ನಿಯಮಗಳು–2019'ನ್ನು ರೂಪಿಸಿದೆ. ವಿಕಲಚೇತನ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವುದರ ಮೂಲಕ ಅವರ ಹಕ್ಕುಗಳನ್ನು ಸಂರಕ್ಷಿಸಲು ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದರು.

ಅಧಿನಿಯಮ ಅನುಷ್ಠಾನಕ್ಕಾಗಿ ರಾಜ್ಯ ಆಯುಕ್ತರ ಕಛೇರಿಯನ್ನು ಸ್ಥಾಪಿಸಿದ್ದು, ಆಯುಕ್ತರನ್ನು ನೇಮಕ ಮಾಡಲಾಗಿದೆ. ಅಲ್ಲದೆ ಸೆಕ್ಷನ್ 80ರ ಪ್ರಕಾರ ಆಯುಕ್ತರಿಗೆ ಕೆಲ ಅಧಿಕಾರಗಳನ್ನು ಪ್ರತ್ಯಯೋಜಿಸಲಾಗಿದ್ದು, ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳು ಇಲಾಖಾವಾರು ಜಿಲ್ಲಾ ಅಂಗವಿಕಲರ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ. ಶಿಕ್ಷಣ ಮೀಸಲಾತಿ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಅಂಗವಿಕಲರಿಗಾಗಿಯೇ ಇರುವ ಶೇ.4 ಮತ್ತು 5ರ ಮೀಸಲಾತಿ ಇದ್ದು, ಅದರ ಪರಿಶೀಲನೆಗಾಗಿ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಎಲ್ಲಾ ಸಾರ್ವಜನಿಕ ಸ್ಥಳಗಳು ವಿಕಲಚೇತನ ಸ್ನೇಹಿಯಾಗಿರಬೇಕು. ಸ್ಥಳಗಳಲ್ಲಿ ಅಂಗವಿಕಲರ ಓಡಾಟಕ್ಕೆ ಸುಲಭ ದಾರಿ, ವೀಲ್ ಚೇರ್ ವ್ಯವಸ್ಥೆ, ಶೌಚಾಲಯ ಸೇರಿದಂತೆ ಅಗತ್ಯವಾದ ಮೂಲಭೂತ ಸೌಕರ್ಯಗಳ ವ್ಯವಸ್ಥೆಗಳಿರಬೇಕು. ರಾಷ್ಟ್ರದಲ್ಲಿ 'ಸುಗಮ್ ಯಾತ್ರಾ' ಜಾರಿಯಾಗಿದೆ. ಈ ಕಾರ್ಯಕ್ರಮದ ಜಾಗೃತಿ ಮೂಡಿಸಲು ಹಳ್ಳಿಹಳ್ಳಿಗಳಲ್ಲಿ ಶಿಬಿರಗಳನ್ನು ಹಮ್ಮಿಕೊಳ್ಳಾಗುತ್ತಿದೆ. ಇದಕ್ಕಾಗಿ ಒಂದು ಆ್ಯಪ್ ಸಿದ್ಧಪಡಿಸಲಾಗಿದ್ದು, ಅದಲ್ಲಿ ವಿಕಲಚೇತನರಿಗೆ ಸಂಪೂರ್ಣ ಮಾಹಿತಿ ಸಿಗಲಿದೆ. ಸರ್ಕಾರದ ಸೌಲಭ್ಯಗಳನ್ನು ಒದಗಿಸಲು 'ಅಂಗವಿಕಲರಿಂದ ಅಂಗವಿಕಲರ ಅಭಿವೃದ್ಧಿ' ಎಂಬಂತೆ ಗ್ರಾಮ ಪಂಚಾಯತ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಕರ್ನಾಟಕದಲ್ಲಿ ಸುಮಾರು 7 ಸಾವಿರ ಪುನರ್‌ವಸತಿ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿರುವುದು ದೇಶಕ್ಕೆ ನಮ್ಮ ರಾಜ್ಯ ಮಾದರಿಯಾಗಿದೆ ಎಂದರು.

ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಕರ್ನಾಟಕ ಮಾತ್ರ ವಿಶೇಷಚೇತನರ 'ಆರೈಕೆದಾರರ ರಕ್ಷಣೆ' ಎಂಬ ಕಾರ್ಯಕ್ರಮವನ್ನು ಏಪ್ರಿಲ್ ಮಾಹೆಯಿಂದ ಜಾರಿಗೆ ತರಲಾಗುತ್ತಿದ್ದು, ಇದರ ಉದ್ದೇಶ ಅಂಗವಿಕಲರ ಪೋಷಕರಿಗೆ ಪ್ರೋತ್ಸಾಹಿಸುವುದಾಗಿದೆ. ಸುಮಾರು 900 ವಸತಿ ಶಾಲೆಗಳಲ್ಲಿ 25 ಪ್ರತಿಶತ ಅಂಗವಿಕಲತೆ ಹೊಂದಿದ ಮಕ್ಕಳಿಗೆ ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೇ 12ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಲು ಅವಕಾಶವಿದೆ. ರಾಷ್ಟ್ರೀಯ ಅಂಗವಿಕಲರ ಅಭಿವೃದ್ಧಿ ಹಣಕಾಸು ಸಂಸ್ಥೆಯ ಮೂಲಕ ಪ್ರತಿವರ್ಷ ರಾಜ್ಯಕ್ಕೆ ರೂ. 100 ಕೋಟಿ ತರಬಹುದಾಗಿದ್ದು, 50 ಲಕ್ಷದವರೆಗೆ ಸಾಲ ಸೌಲಭ್ಯ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ, ವಿಕಲಚೇತನರ ಪ್ರತಿನಿಧಿ ಬಿ.ಹಂಪಣ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ರಸ್ತೆ ಕಾಮಗಾರಿಗಳಿಗೆ ಚಾಲನೆ

• ಪ್ರಜಾವಾಹಿನಿ–ಕೂಡ್ಲಿಗಿ



ವಿಧಾನಸಭಾ ಕ್ಷೇತ್ರದ ನಿಂಬಳಗೆರೆ ಗ್ರಾಮದಿಂದ ಉಜ್ಜಿನಿ ಗ್ರಾಮದವರೆಗೆ ಹಾಗೂ ಶಾಂತನಹಳ್ಳಿಯಿಂದ ನಿಂಬಳಗೆರೆಯವರಿಗೆ ರಸ್ತೆ ಅಗಲೀಕರಣ ಹಾಗೂ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಸಾನಿಧ್ಯವಹಿಸಿದ್ದ ಜಗದ್ಗುರು ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶ್ರೀನಿವಾಸ್ ಎನ್.ಟಿ.ರವರು ಚಾಲನೆ ನೀಡಿದರು.

ನಾನು ದಿನನಿತ್ಯ ಪ್ರಯಾಣಿಸುವ ಗ್ರಾಮದ ರಸ್ತೆಗಳು ಇವಾಗಿವೆ. ಬಹಳ ವರ್ಷಗಳಿಂದ ಅಭಿವೃದ್ಧಿ ಹೊಂದದ ರಸ್ತೆಗಳಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿತ್ತು. ಶಾಸಕರು ಕ್ಷೇತ್ರದ ಅಭಿವೃದ್ಧಿಗೆ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಶಿವಾಚಾರ್ಯ ಮಹಾಸ್ವಾಮಿ ಅಭಿನಂದಿಸಿದರು.

ಶಾಸಕ ಡಾ.ಶ್ರೀನಿವಾಸ್ ಮಾತನಾಡಿ, ನಿಂಬಳಗೆರೆ ಗ್ರಾಮದಿಂದ ಉಜ್ಜಿನಿ ಗ್ರಾಮದವರೆಗೆ(ರೂ.990 ಲಕ್ಷಗಳು) ಶಾಂತನಹಳ್ಳಿಯಿಂದ ನಿಂಬಳಗೆರೆಯವರೆಗೆ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿ ಕ್ಷೇತ್ರಕ್ಕೆ ಅತೀ ಹೆಚ್ಚು ಅನುದಾನವನ್ನು ನೀಡಿದ್ದಾರೆ. ಇದರಿಂದಾಗಿ ಕ್ಷೇತ್ರದ ಎಲ್ಲಾ ಹಳ್ಳಿಗಳ ರಸ್ತೆಗಳು, ಶಾಲೆಗಳು, ಆಸ್ಪತ್ರೆಗಳ ಅಭಿವೃದ್ಧಿಗೆ ಪುಷ್ಟಿಕರಿಸಿ ಮಹಾಸ್ವಾಮೀಜಿಗಳ ಆಶೀರ್ವಾದದಿಂದ ಹಾಗೂ ಕೂಡ್ಲಿಗಿ ಕ್ಷೇತ್ರದ ಜನತೆಯ ಸದೃಢ ಹೆಜ್ಜೆಯೊಂದಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಪಿಡಬ್ಲ್ಯೂಡಿ ಅಧಿಕಾರಿ ನಾಗನಗೌಡ, ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ, ಮಂಗಾಪುರ ಹಾಗೂ ನಿಂಬಳಗೆರೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರುಗಳು ಹಾಗೂ ಉಜ್ಜಿನಿ ಗ್ರಾಮ ಪಂಚಾಯತಿ ಸದಸ್ಯರು, ಗ್ರಾಮಸ್ಥರು, ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

# ಮಾ.8ರಂದು ಲೋಕ ಅದಾಲತ್

• ಪ್ರಜಾವಾಹಿನಿ–ಬಳ್ಳಾರಿ



ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದಂತೆ ಮಾರ್ಚ್ 8ರಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ನಡೆಸಲಾಗುತ್ತಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಕೆ.ಜಿ.ಶಾಂತಿ ತಿಳಿಸಿದ್ದಾರೆ.

ಸಾರ್ವಜನಿಕರು ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಬ್ಯಾಂಕ್, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣ, ವೈವಾಹಿಕ, ಕೌಟುಂಬಿಕ, ಸಿವಿಲ್ ಹಾಗೂ ಇತರೆ ಪ್ರಕರಣಗಳನ್ನು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಮಾರ್ಚ್ 8ರಂದು ನಡೆಯುವ ಬೃಹತ್ ಲೋಕ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿಕೊಳ್ಳಬಹುದಾಗಿದೆ. ಸಾರ್ವಜನಿಕರು, ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಂಡು ವಿವಾದಗಳನ್ನು ಅಂತ್ಯಗೊಳಿಸಬಹುದು ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ್ ಅದಾಲತ್ ಅಂಗವಾಗಿ ಪ್ರತಿದಿನ ಬಳ್ಳಾರಿ, ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಪೂರ್ವಭಾವಿ ಬೈಠಕ್ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿ ಅಥವಾ ದೂ.08392–278077ಗೆ ಎಂದು ಸಂಪರ್ಕಿಸಬಹುದು.